**ಓ.ಎಸ್. 48/2018** **ಪಿ.ಡಬ್ಲ್ಯೂಃ 3**

ದಿನಾಂಕಃ **15.02.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿಪರ ವಕೀಲರಿಂದ –**

1. ನಾನು **2003** ರಿಂದ ನ್ಯಾಯಾವಾದಿ ಆಗಿರುತ್ತೇನೆ. 2013 ರಿಂದ ನೋಟರಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಿಪಿ.1,2 ಅನ್ನು ನಾನೇ ತಯಾರಿಸಿರುತ್ತೇನೆ. ಆ ಸಮಯದಲ್ಲಿ ನಮ್ಮ ಕಛೇರಿ ಮೈಸೂರು ಆರ್.ಟಿ.ಓ ಕಛೇರಿ ಬಳಿ ಇತ್ತು. ನಿಪಿ.1,2 ಅನ್ನು ತಯಾರಿಸಲು ನನಗೆ ಪುಟ್ಟಶೆಟ್ಟಿ ಮತ್ತು ಹುಚ್ಚೇಗೌಡ ಮಾಹಿತಿ ನೀಡಿರುತ್ತಾರೆ. ಆ ಸಮಯ ಸದರಿಯವರು ನನಗೆ ಸ್ಟಾಂಪ್ ಪೇಪರ್ ಮತ್ತು ಆರ್.ಟಿ.ಓ ಗಳನ್ನು ನನಗೆ ಹುಚ್ಚೇಗೌಡ ಅಂದರೆ ಪ್ರತಿವಾದಿ ನೀಡಿರುತತಾರೆ. ನಿಪಿ.1,2 ರ ಅಂಶಗಳನ್ನು ಆರ್.ಟಿ.ಓ ಬಳಿ ಇರುವ ಡಿ.ಟಿ.ಪಿ ಸೆಂಟರ್ ನಲ್ಲಿ ಬೆರಳಚ್ಚು ಮಾಡಿಸಿರುತ್ತೇವೆ.

2. ನಿಪಿ.1,2 ಕ್ಕೆ ಬಿಕಲಂ ಹಾಕಲು ತೊಂದರೆ ಇರಲಿಲ್ಲ. ನಿಪಿ.1,2 ರಲ್ಲಿ ಕಂಡು ಬಂದಿರುವ ತಪ್ಪುಗಳಿಗೆ ಸಂಬಂಧಪಟ್ಟಂತೆ ನಾನು ಸದರಿ ದಾಖಲಾತಿಯ ಪಕ್ಷಗಾರರ ಸಹಿ ಪಡೆದಿರುವುದಿಲ್ಲ. ನಾನು ವಕೀಲರಾಗಿರುವುದರಿಂದ ಯಾವ ಕಡೆ ತಪ್ಪುಗಳಾಗಿದ್ದಕ್ಕೆ ಪಕ್ಷಗಾರರ ಸಹಿ ಪಡೆಯಬೇಕಿತ್ತು ನನಗೆ ಮಾಹಿತಿ ಇತ್ತಾ ಎಂಬ ಪ್ರಶ್ನೆಗೆ ಆ ಸಮಯ ನನಗೆ ಗೊತ್ತಿರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

3. ನಿಪಿ.1,2 ಅನ್ನು ಬರೆಯುವಾಗ ನಾನು ಆರ್.ಟಿ.ಸಿ ಬಿಟ್ಟು ಬೇರೆ ದಾಖಲಾತಿಗಳನ್ನು ನೋಡಿಲ್ಲ ಎಂದು ನಮೂದಿಸಿಲ್ಲ. ಪಕ್ಷಗಾರರು ನಿಪಿ.1,2 ಅನ್ನು ಸಹಿ ಮಾಡುವ ಸಮಯದಲ್ಲಿ ಮಾಡಿಕೊಂಡಿರುತ್ತಾರೆ, ಸದರಿ ಹಣದ ವ್ಯವಹಾರ ನನ್ನ ಕಛೇರಿಯಲ್ಲಿ ನಡೆದಿರುತ್ತದೆ. ಸದರಿ ಹಣವನ್ನು ಚೆಕ್ ಅಥವಾ ಡಿ.ಡಿ ಮೂಲಕ ನೀಡಲು ನಾನು ಯಾವುದೇ ಸಜೇಷನ್ ನೀಡಿರುವುದಿಲ್ಲ,

4. 20 ಸಾವಿರ ಮೇಲ್ಪಟ್ಟ ಹಣದ ವ್ಯವಹಾರ ಮಾಡುವಾಗ ಡಿ.ಡಿ ಅಥವಾ ಆರ್.ಟಿ.ಜಿ.ಎಸ್ ಮೂಲಕ ಮಾಡಬೇಕು ಎಂದು ನನಗೆ ಗೊತ್ತು. ನಿಪಿ.1 ರಲ್ಲಿ 3,25,000/- ಹಣ ಪಡೆದುಕೊಂಡಿರುವ ಬಗ್ಗೆ ನಮೂದು ಮಾಡಿಲ್ಲ. ನೋಟರಿ ಆಕ್ಟ್ ಪ್ರಕಾರ ಕ್ರಯ ಕರಾರು, ವಿಲ್, ಯಾವುದೇ ದಾಖಲಾತಿ ನಮ್ಮ ಬಳಿ ಅಟೆಸ್ಟ್ ಮಾಡಿಕೊಳ್ಳಲು ಬಂದಾಗ ಪಕ್ಷಗಾರರ ಸಹಿ, ಫೋಟೋ ಹಾಗೂ ವಿಳಾಸವನ್ನು ನಮ್ಮ ರಿಜಿಸ್ಟರ್ ನಲ್ಲಿ ಪಡೆಯಬೇಕಾಗಿರುತ್ತದೆ ಎಂದರೆ ಸರಿ. ಆ ಪ್ರಕಾರ ನಾನು ರಿಜಿಸ್ಟರ್ ನಲ್ಲಿ ನಿಪಿ.1,2 ರಲ್ಲಿ ಸಂಬಂಧಪಟ್ಟ

ಪಕ್ಷಗಾರರ ಸಹಿ, ಫೋಟೋ ಹಾಗೂ ವಿಳಾಸವನ್ನು ನಮ್ಮ ರಿಜಿಸ್ಟರ್ ನಲ್ಲಿ ಪಡೆದಿರುವುದಿಲ್ಲ. ಸದರಿ ರಿಜಿಸ್ಟರ್ ಅನ್ನು ನಾವು ಕರ್ನಾಟಕ ಸರಕಾರಕ್ಕೆ ಹಿಂದಿರುಗಿಸಬೇಕು ಎಂದರೆ ಸರಿ.

5. ಅದೇ ರೀತಿ 3 ತಿಂಗಳ ಒಳಗೆ ದಾವಾ ಸ್ವತ್ತನ್ನು ಅನಿಲೇಷನ್ ಮಾಡಿಸಿ ಕೊಡುವಂತೆ ಪ್ರತಿವಾದಿ ಹುಚ್ಚೇಗೌಡ ತಿಳಿಸಿರುತ್ತಾರೆ. ಇವತ್ತಿನವರೆಗೆ ಕೂಡ ಸದರಿ ಸ್ವತ್ತು ಅನಿಲೇಷನ್ ಆಗಿರುತ್ತದೆಯೋ ಇಲ್ಲವೊ ನನಗೆ ಗೊತ್ತಿಲ್ಲ. ಅದೇ ರೀತಿ ನಾನು ನಿಪಿ.2 ಹಣಸಂದ ರಶೀದಿಯಲ್ಲಿ ಇಬ್ಬರು ಪಕ್ಷಗಾರರ ಸಹಿ ಪಡೆದಿರುವುದಿಲ್ಲ ಎಂದರೆ ಸರಿ.

6. ನನ್ನ ಮುಂದೆ ಹಣದ ವ್ಯವಹಾರ ನಡೆದಿರುತ್ತದೆ ಎಂದು ನಾನು ಹೇಳಿದ್ದು ಈಬಗ್ಗೆ ನಿಪಿ.1,2 ರಲ್ಲಿ ನಮೂದು ಮಾಡಿರುವುದಿಲ್ಲ. ವಾದಿ ಪುಟ್ಟಶೆಟ್ಟಿ ತಮ್ಮ ಹೆಂಡತಿ ಪರ ಮತ್ತು ಅವರ ಸಂಬಂಧಿಕರ ಪರವಾಗಿ ವಿವಿಧ ನ್ಯಾಯಾಲಯಗಳಲ್ಲಿ ಪ್ರಕರಣ ನಡೆಸುತ್ತಿದ್ದಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಅದೇ ರೀತಿ ವಾದಿ ಪುಟ್ಟಶೆಟ್ಟಿ ತಮ್ಮ ಹೆಂಡತಿ ಪರವಾಗಿ ಮಾನ್ಯ ಹೆಚ್ಚುವರಿ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ದಾವೆ ನಡೆಸುತ್ತಿದ್ದಾರೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

7. ನನ್ನ ಸಮಕ್ಷಮ ಯಾವುದೇ ವ್ಯವಹಾರ ನಡೆದಿಲ್ಲ. ವಾದಿ ಪುಟ್ಟಶೆಟ್ಟಿ ಹಾಕಿಕೊಟ್ಟದ್ದಕ್ಕೆ execution admitted before me ಎಂದು ಸಹಿ ಹಾಕಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.2 ಹಣ ಸಂದ ರೀಶಿದಿ ಕೂಡ ಕೈಬರವಣಿಗೆ ಆಗಿರುತ್ತದೆ ಎಂದರೆ ಸರಿ. ಅದರಲ್ಲಿ ಕೂಡ ವಾದಿ-ಪ್ರತಿವಾದಿ ಸಹಿ ಇರುವುದಿಲ್ಲ ಎಂದರೆ ಸರಿ. ಸದರಿ ನಿಪಿ.2 ರಲ್ಲಿ ಕೂಡ 3,25,000/- ತೆಗೆದುಕೊಂಡಿರುತ್ತೇನೆ ಎಂಬ ಒಕ್ಕಣೆ ಇರುವುದಿಲ್ಲ.

8. ವಾದಿ ಪುಟ್ಟಶೆಟ್ಟಿ ನನ್ನ ಬಳಿ ಬಂದು ನೋಟರಿ ಮಾಡಿಕೊಡು ಎಂದು ಕೇಳಿದ್ದಕ್ಕೆ ಮಾತ್ರ ನಾನು ಮಾಡಿಕೊಟ್ಟಿದ್ದು ನನ್ನ ಸಮಕ್ಷಮ ಯಾವುದೇ ವ್ಯವಹಾರ ನಡೆದಿಲ್ಲ ಎಂದರೆ ಸುಳ್ಳು. ನಿಪಿ.1,2 ಅನ್ನು ನಾನು ಬೆರಳಚ್ಚು ಮಾಡಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ ಪುಟ್ಟಶೆಟ್ಟಿ ಅನೂಕೂಲ ಮಾಡಿಕೊಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್

ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.